## ಸಹಾಯಕ ಆಯುಕ್ತರು, ಬಳ್ಳಾರಿ ಇವರ ನ್ಯಾಯಾಲಯದಲ್ಲಿ

ಸಂ/ಕಂ/ಅಪೀಲು/44/16-17

ದಿನಾಂಕ :19 /07/2016.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ಮಮತಾ ಗಂಡ ಶ್ರೀ ನಂದಿ ಶೇಖರಪ್ಪ ಸಾ\|\| ರಣಜೀತಪುರ ಗ್ರಾಮ, ತಾ\|\| ಸಂಡೂರು ಜಿ\|\| ಬಳ್ಳಾರಿ<br><br>**(ಶ್ರೀ ಪಿ.ಮಲ್ಲಯ್ಯ , ಬಿ.ವಿರೇಶ, ವಕೀಲರು, ಬಳ್ಳಾರಿ)** | 1. ತಹಶೀಲ್ದಾರರು, ಸಂಡೂರು<br>2. ಕಂದಾಯ ನೀರಿಕ್ಷಕರು, ಸಂಡೂರು<br>3. ಗ್ರಾಮಲೆಕ್ಕಾಧಿಕಾರಿಗಳು, ರಣಜೀತಪುರ ಗ್ರಾಮ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸಂ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಂಡೂರು | ರಣಜೀತಪುರ | 20 | 4-29 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಸಂಡೂರು ತಾಲ್ಲೂಕಿನ ರಣಜೀತಪುರ ಗ್ರಾಮದ ಸ. ನಂ 20 ವಿ: 4-29 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಸಂಡೂರು ಇವರ ಹಕ್ಕು ಬದಲಾವಣೆ ಆದೇಶ ಎಂ.ಆರ್.ನಂ H2/2014-15 ದಿ:27/02/2015 ರ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟಿಸಗಳನ್ನು ಕಳುಹಿಸಿ ದಿನಾಂಕ:19.07.2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ವಾದಿಗಳು ತಮ್ಮ ಮೇಲ್ಮನವಿಯಲ್ಲಿ ಸಂಡೂರು ತಾಲ್ಲೂಕಿನ ರಣಜೀತಪುರ ಗ್ರಾಮದ ಸ. ನಂ 20 ವಿ: 4-29 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಸಂಡೂರು ಇವರ ಹಕ್ಕು ಬದಲಾವಣೆ ಆದೇಶ ಎಂ.ಆರ್.ನಂ H2/2014-15 ದಿ:27/02/2015 ರ ಆದೇಶದಲ್ಲಿ ವಾದಿಯು ತನ್ನ ಮಕ್ಕಳಾದ ಚೋಳರಾಜ ಮತ್ತು ನಾಗರಾಜ ಎಂದು ನಮೂದಿಸುವ ಬದಲಾಗಿ ಚೋಳರಾಜ ತಂದೆ ನಾಗರಾಜ ಎಂದು ನಮೂದಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ನೋಂದಾಯಿತ ದಾನ ಪತ್ರದಂತೆ ಹೆಸರನ್ನು ನಮೂದಿಸಲು ಆದೇಶಿಸಬೇಕೆಂದು ಕೋರಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದ ವಾದಿಯ ಮೇಲ್ಮನವಿಯನ್ನು ಹಾಗೂ ಮೇಲ್ಮನಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ವಾದಿಯ ಮಕ್ಕಳಾದ ಚೋಳರಾಜ,ನಾಗರಾಜ ಇವರಿಬ್ಬರ ಮೈನರ್ ಗಾರ್ಡಿಯನ್ ಆಗಿ ತಾಯಿ ಮಮತಾ ಗಂಡ ನಂದಿಶೇಕರಪ್ಪ ಇವರು ನೋಂದಾಯಿತ ದಾನ ಪತ್ರದ ಮೂಲಕ ಪ್ರಸ್ತಾಪಿತ ಜಮೀನನ್ನು ಪಡೆದಿರುವುದು ಕಂಡುಬರುತ್ತದೆ. ಕಾರಣ ಕಂದಾಯ ನಿರೀಕ್ಷಕರು, ಸಂಡೂರು ಇವರ ಆದೇಶವನ್ನು ರದ್ದುಪಡಿಸಿ ನೋಂದಾಯಿತ ದಾನ ಪತ್ರದಂತೆ ಹೆಸರು ದಾಖಲಿಸಲು ಆದೇಶಿಸುವ ಈ ಕೆಳಕಂಡ

:: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ವಾದಿಯ ಮೇಲ್ಮನವಿಯನ್ನು ಪುರಸ್ಕರಿಸಿದೆ.

ಸಂಡೂರು ತಾಲ್ಲೂಕು ರಣಜೀತಪುರ ಗ್ರಾಮದ ಸ. ನಂ 20 ವಿ: 4-29 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಸಂಡೂರು ಇವರ ಹಕ್ಕು ಬದಲಾವಣೆ ಆದೇಶ ಎಂ.ಆರ್.ನಂ H2/2014-15 ದಿ:27/02/2015 ರ ಆದೇಶವನ್ನು ರದ್ದುಪಡಿಸಿದೆ.

ನೋಂದಾಯಿತ ದಾನ ಪತ್ರ ಸಂಖ್ಯೆ 2199/14-15 ದಿನಾಂಕ:14.01.2015 ರಲ್ಲಿರುವಂತೆ ಚೋಳರಾಜ,ನಾಗರಾಜ ಇವರಿಬ್ಬರ ಮೈನರ್ ಗಾರ್ಡಿಯನ್ ಆಗಿ ತಾಯಿ ಮಮತಾ ಗಂಡ ನಂದಿ ಶೇಖರಪ್ಪ ಎಂದು ನಮೂದಿಸಲು ತಹಶೀಲ್ದಾರರು ಸಂಡೂರು ಇವರಿಗೆ ದಿನಾಂಕ:19.07.2016 ರಂದು ಬಹಿರಂಗ ನ್ಯಾಯಲಯದಲ್ಲಿ ಘೋಷಿಶಿ ಆದೇಶಿಸಿದೆ.

ಸಹಾಯಕ ಆಯುಕ್ತರು,

ಬಳ್ಳಾರಿ

ಗೆ,

**ವಾದಿ ಮತ್ತು ಪ್ರತಿವಾದಿಗಳಿಗೆ**

**ತಹಶೀಲ್ದಾರರು, ಸಂಡೂರು** - ಇವರಿಗೆ ಸೂಕ್ತ ಕ್ರಮಕ್ಕಾಗಿ.